## <u>ಪತ್ರಿಕಾ ಪ್ರಕಟಣೆ</u>

ಮಾನ್ಯ ಸಂಪಾದಕರೆ, ವರದಿಗಾರರೆ, ಮಾಧ್ಯಮ ಪ್ರತಿನಿಧಿಗಳೆ,
ಹೋರಾಟದ ವಂದನೆಗಳು.

ಇತ್ತೀಚೆಗೆ ನಡೆದ ಮಾವಿನಹೊಲ ಎನ್‌ಕೌಂಟರ್ ಹಿನ್ನಲೆಯಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ನಮ್ಮ ಪ್ರತಿಕ್ರಿಯೆಯನ್ನು ಈ ಮೂಲಕ ಕಳುಹಿಸಿಕೊಡುತ್ತಿದ್ದೇವೆ.

ತಾವುಗಳು ಈ ಪ್ರಕಟಣೆಯನ್ನು ಪರಿಗಣಿಸಿ ಪ್ರಕಟಿಸಿ ಸಹಕರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ.

ಶುಭಾಶಯಗಳೊಂದಿಗೆ,

**3.12.2008**

ಭಾಸ್ಕರ್
(ಪರವಾಗಿ)
ಸಿಪಿಐ (ಮಾವೋವಾದಿ)
ದೃಕ್ಪಥ ಪ್ರದೇಶ
ಕರ್ನಾಟಕ

ಪಕ್ಷದ ಮೇರುತಿ ದಳವನ್ನು ಹೊಂಚು ಹಾಕಿ ನಿರ್ಮೂಲಿಸಲು ಕ್ರೂರ ಪೋಲೀಸ್ ಅಧಿಕಾರಿಗಳು ಕುತಂತ್ರ ರೂಪಿಸಿದ್ದರು. ಆಡಳಿತದಲ್ಲಿರುವ ಹಿಂದೂ ಫ್ಯಾಸಿಸ್ಟ್ ಪಕ್ಷವಾದ ಬಿಜೆಪಿಯ ನೇರ ನಿರ್ದೇಶನ ಇದಕ್ಕಿತ್ತು. ಜನರ ಕನಿಷ್ಠ ಮೂಲಭೂತ ಸಮಸ್ಯೆಗಳನ್ನು ಆಲಿಸಿ ಪರಿಹರಿಸಲು ಲಾಯಕ್ಕಿಲ್ಲದ ಈ ಸರ್ಕಾರಗಳು ಜನರೆತ್ತುವ ದನಿಗಳನ್ನು ಸಹಿಸುತ್ತಿಲ್ಲ. ಅದು ಪ್ರಬಲ ದನಿಯಾಗಿದ್ದಲ್ಲಿ ಅದು ಹೊರಬರುತ್ತಿರುವ ಗಂಟಲುಗಳನ್ನೇ ಹಿಚುಕಿ ಉಸಿರಾಟವನ್ನೇ ನಿಲ್ಲಿಸಿಬಿಡುವ ಕ್ರೂರ ಫ್ಯಾಸಿಸ್ಟ್ ಕ್ರಮಗಳನ್ನು ಜಾರಿಗೊಳಿಸುತ್ತಿವೆ.

ಇದರ ಭಾಗವಾಗೇ ನಮ್ಮ ಪ್ರೀತಿಪಾತ್ರ ಸಂಗಾತಿಗಳಾದ ಮನೋಹರ್, ದೇವಯ್ಯ ಮತ್ತು ರವಿಯವರನ್ನು ನರಹಂತಕ ಪೋಲೀಸ್ ಪಡೆಗಳು ಕ್ರೂರವಾಗಿ ಕೊಂದುಹಾಕಿವೆ. ಇಷ್ಟಕ್ಕೂ ಈ ಸಂಗಾತಿಗಳು ಮಾಡಿರುವ ತಪ್ಪುಗಳಾದರೂ ಏನು? ಜನರನ್ನು ಸಂಘಟಿಸಲು ತೊಡಗಿದ್ದು, ಈ ವ್ಯವಸ್ಥೆ ಮತ್ತು ಅದರ ಪ್ರಭುತ್ವದ ಕ್ರೂರ ನಿಜಬಣ್ಣವನ್ನು ಜನರೆದುರು ಬಿಚ್ಚಿಡಲು ತೊಡಗಿದ್ದು, ಜನರಿಗಾಗಿ ಪೂರ್ಣವಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದು, ಜನರಿಗಾಗಿ ಎಲ್ಲಾ ರೀತಿಯ ತ್ಯಾಗಗಳಿಗೂ ಸಿದ್ಧರಾಗಿದ್ದು, ತಮ್ಮ ಸ್ವರಕ್ಷಣೆಗಾಗಿ ಬಂದೂಕನ್ನು ಹಿಡಿದುಕೊಂಡಿದ್ದು, ಜನರ ರಕ್ಷಣೆಗಾಗಿ ಪಣತೊಟ್ಟು ಕೆಲಸ ಮಾಡಿದ್ದು, ...... ಇವುಗಳೇ ಈ ಸಂಗಾತಿಗಳನ್ನು ಕಗ್ಗೊಲೆ ಮಾಡುವಷ್ಟು ಮಟ್ಟದ ಅಪರಾಧಗಳಾದರೆ ಈ ವ್ಯವಸ್ಥೆ ಎಷ್ಟು ಕ್ರೂರ ಈ ಪ್ರಭುತ್ವ ಎಷ್ಟು ಫ್ಯಾಸಿಸ್ಟ್ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಹಾಗಾದರೆ ದೊಡ್ಡದೊಡ್ಡ ಬಿಲಿಯಾಧಿಪತಿಗಳು, ಭೂಮಾಲೀಕರು, ಮಾಫಿಯಾ ಡಾನ್‌ಗಳು, ರಾಜಕಾರಣಿಗಳು ಪ್ರತಿಕ್ಷಣವೂ ಜನವಿರೋಧಿ

ಕೆಲಸಗಳನ್ನೇ ಮಾಡುತ್ತಾ, ಅಕ್ರಮಗಳನ್ನು ಎಸಗುತ್ತಾ ಅದಕ್ಕೆಂದೇ ಅಕ್ರಮ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡು ತಮ್ಮ ಕಾರುಬಾರು ನಡೆಸುತ್ತಿಲ್ಲವೆ, ಯಾಕೆ ಅವರನ್ನು ಮುಟ್ಟುತ್ತಿಲ್ಲ? ಅವರ ಮನೆ ಇನ್ನಿತರ ರಹಸ್ಯತಾಣಗಳನ್ನು ಶೋಧಿಸುತ್ತಿಲ್ಲ, ಅವರನ್ನು ಯಾಕೆ ಕನಿಷ್ಠ ಕೇಸುಗಳಡಿ ಕೂಡ ತರುತ್ತಿಲ್ಲ? ಎ.ಟಿ. ಬಾಬುರಂತಹ ಯಾವುದೇ ಶಸ್ತ್ರ ಇಲ್ಲದ ಹೋರಾಟಗಾರರನ್ನು ಪೋಲೀಸ್ ಹಾಗೂ ಮದ್ಯ ಮಾಫಿಯಾ ಸೇರಿ ನಡುಬೀದಿಯಲ್ಲಿ ಕೊಚ್ಚಿ ಸಾಯಿಸುತ್ತಿರುವಾಗ ತಡೆಯಲು ಏನು ಮಾಡಿದರು? ಇದೀಗ ಅವರನ್ನು ಕೊಂದವರನ್ನು ಕೂಡ ಹಿಡಿಯದೇ ಬಿಟ್ಟಿದ್ದಾರೆ. ನಿಜವಾದ ಕೊಲೆಗಾರರು ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಇದಕ್ಕೆ ಏನೆಂದುಕೊಳ್ಳೋಣ? ಇಂತಹ ನೂರಾರು ಸಾವಿರಾರು ಉದಾಹರಣೆಗಳಿವೆ. ದಿನನಿತ್ಯ ಇವುಗಳು ನಡೆಯುತ್ತಲೇ ಇರುತ್ತವೆ. ಇವುಗಳನ್ನು ನೋಡಿದರೂ ನೋಡದಂತೆ ಇರುವವರು, ತಿರುಚಿ ಹೇಳುವವರು, ಸಶಸ್ತ್ರ ಹೋರಾಟ ಮಾಡುವುದೇ ತಪ್ಪು ಎಂದು ಪ್ರಚಾರ ನಡೆಸುವವರು ಶಸ್ತ್ರ ಹಿಡಿಯದೇ 'ಪ್ರಜಾತಾಂತ್ರಿಕ' ಹೋರಾಟ ನಡೆಸಿದರೆ ಪ್ರಾಣ ರಕ್ಷಣೆಯಾಗಿ ದೊಡ್ಡ ಕೊಡುಗೆಗಳನ್ನು ನೀಡಬಹುದು ಎಂದು ವಾದಿಸುವವರು ಈ ಪ್ರಭುತ್ವದ ನಿಜ ಬಣ್ಣವನ್ನು ಗಮನಿಸುತ್ತಿಲ್ಲ. ಇಲ್ಲವೆ ಅರ್ಥ ಮಾಡಿಕೊಳ್ಳುತ್ತಿಲ್ಲ. ಅದಲ್ಲದಿದ್ದರೆ ಅರ್ಥವಾದರೂ  ತಮ್ಮ ಮಿತಿಗಳಿಗೆ ತಕ್ಕಂತೆ ಅವುಗಳನ್ನು ವ್ಯಾಖ್ಯಾನಿಸಿ ಸಮರ್ಥನೆ ಪಡೆದುಕೊಳ್ಳಲು ಯತ್ನಿಸುತ್ತಿದ್ದಾರೆ. ಇವರ ಮಾತುಗಳಲ್ಲಿ ಪ್ರಭುತ್ವ ಮತ್ತದರ ಕ್ರೂರ ಪಡೆಗಳ ಜನವಿರೋಧಿತನಗಳು ಹಾಗೂ ಫ್ಯಾಸಿಸ್ಟ್‌ತನಗಳ ವಿರುದ್ಧ ಗಟ್ಟಿದನಿಗಳಿಲ್ಲ, ಕಗ್ಗೊಲೆ ಮಾಡುವ ಸರ್ಕಾರಗಳನ್ನು ತಡೆಯುವ ಇಚ್ಛಾಶಕ್ತಿಯಿಲ್ಲ. ನಮ್ಮ ಪಕ್ಷ ಸಶಸ್ತ್ರ ಹೋರಾಟ ಆರಂಭಿಸಿದ್ದರಿಂದಲೇ ಈ ಕಗ್ಗೊಲೆಗಳನ್ನು ಸರ್ಕಾರಗಳು ನಡೆಸುತ್ತಿವೆ, ಅದಿಲ್ಲವೆಂದರೆ ಸರ್ಕಾರಗಳು ಜನರನ್ನು ಮಲೆನಾಡು ಕರಾವಳಿಗಳಲ್ಲಿ ಬಿಟ್ಟುಬಿಡುತ್ತಿದ್ದರು ಎಂಬಂತೆ ಮಾತಾಡುತ್ತಿದ್ದಾರೆ. ಹಾಗೆ ಮಾಡುವಾಗ ಸಾಮ್ರಾಜ್ಯಶಾಹಿ ಪ್ರಾಯೋಜಿತ ಸರ್ಕಾರಿ ಯೋಜನೆಗಳು ಅದರಿಂದಾಗಬಹುದಾದ ಸಾಮಾಜಿಕ ಹಾಗೂ ನೈಸರ್ಗಿಕ ಅನಾಹುತಗಳನ್ನು, ಭೂಮಾಲೀಕರ ಕ್ರೂರ ಶೋಷಣೆಗಳಡಿ ನರಳುತ್ತಿರುವ ಬಡರೈತ-ಕೂಲಿಗಳನ್ನು, ಸರ್ಕಾರದ ಜನವಿರೋಧಿ ನೀತಿಗಳಿಂದ ಸಮಸ್ಯೆಗಳಿಗೆ ಈಡಾಗಿರುವ ಶ್ರೀಮಂತ ರೈತರನ್ನು ಡ್ಯಾಮ್, ವಿದ್ಯುತ್, ವಿಶೇಷ ಆರ್ಥಿಕ ವಲಯಗಳಂತಹ ಜನವಿರೋಧಿ ಯೋಜನೆಗಳಿಂದ ಬದುಕು ಹಾಗೂ ಪ್ರಾಣಗಳನ್ನೇ ಕಳೆದುಕೊಳ್ಳಲಿರುವ ಜನರನ್ನು ಮರೆಯುತ್ತಿದ್ದಾರೆ. ಇಲ್ಲವೆಂದರೆ ಜಾಣ ಮರೆವು ಪ್ರದರ್ಶಿಸುತ್ತಿದ್ದಾರೆ.

ಇಷ್ಟಾದರೂ ಕೆಲವರು, ಸರ್ಕಾರ ನಡೆಸುತ್ತಿರುವ ಈ ಕಗ್ಗೊಲೆಗಳು ಪ್ರಜಾತಂತ್ರಕ್ಕೆ ವಿರುದ್ಧವಾದುದು ಎಂಬ ಗ್ರಹಿಕೆಯೂ ಇಲ್ಲದಂತೆ ವರ್ತಿಸುತ್ತಿದ್ದಾರೆ. ಸರ್ಕಾರ ಪೋಲೀಸ್ ಕಾರ್ಯಾಚರಣೆ ನಡೆಸುತ್ತಾ ಹೋರಾಟಗಾರರನ್ನು ಕಗ್ಗೊಲೆಗೈಯುವುದು ಯಾವ ವ್ಯವಸ್ಥೆಯ ಲಕ್ಷಣ? ಇದು ಪ್ರಜಾತಾಂತ್ರಿಕ ವ್ಯವಸ್ಥೆಯ ಲಕ್ಷಣವೆ? ಜನರು ಹತ್ತಾರು ವರ್ಷಗಳಿಂದ ವಿರೋಧಿಸುತ್ತಿದ್ದರೂ ಎಷ್ಟು ಜನವಿರೋಧಿ ಯೋಜನೆಗಳನ್ನು ರದ್ದುಗೊಳಿಸಲಾಗಿದೆ? ಇವೆಲ್ಲಾ ಪ್ರಜಾತಾಂತ್ರಿಕತೆಯೇ?

ಸಿಪಿಐ (ಎಂಎಲ್)ನ ಚಿಕ್ಕಮಗಳೂರು ಘಟಕವು ಹೇಳಿಕೆ ನೀಡಿ 'ನಾವು ಸಶಸ್ತ್ರ ಹೋರಾಟವನ್ನು ತೊರೆಯಬೇಕೆಂದೂ, ಪ್ರಜಾತಾಂತ್ರಿಕ ಹೋರಾಟ ನಡೆಸಬೇಕೆಂದು' ಕರೆ ನೀಡಿದೆ. "ರವಿಯಂತಹವರ ಕಗ್ಗೊಲೆಗೆ ಕಾರಣವಾಗುವ ಸಶಸ್ತ್ರ ಹೋರಾಟ ತಪ್ಪಾದುದು" ಎಂಬಂತೆ ಹೇಳಿದ್ದಾರೆ. ವರ್ಗ ರಾಜಕೀಯ ಹಾಗೂ ವರ್ಗಹೋರಾಟಕ್ಕೆ ಎಂದೋ ತಿಲಾಂಜಲಿ ಇಟ್ಟು ಸಂಸದೀಯ ಕೊಚ್ಚೆಗುಂಡಿ

ಸೇರಿಕೊಂಡಿರುವ ಈ ಪಕ್ಷ ಇಂತಹ ಬಾಲಿಶತನದ ಹೇಳಿಕೆ ನೀಡುವುದು ಸಹಜವೇ. ಕಗ್ಗೊಲೆ ನಡೆಸುತ್ತಿರುವ ಪ್ರಭುತ್ವವನ್ನು ಕನಿಷ್ಠ ಗಟ್ಟಿ ದನಿಯಲ್ಲಿ ಖಂಡಿಸಲಾಗದ ಈ ಪಕ್ಷದ ಸೋಗಲಾಡಿತನಕ್ಕೆ ಇದೊಂದು ಉದಾಹರಣೆ. ಸಶಸ್ತ್ರ ಹೋರಾಟದಿಂದಾಗಿಯೇ ಪ್ರಭುತ್ವ ಈ ಕಗ್ಗೊಲೆಗಳನ್ನು ನಡೆಸುತ್ತಿದೆ ಎಂಬಂತೆ ಹೇಳಿರುವ ಈ ಪಕ್ಷದ ಚಿಕ್ಕಮಗಳೂರು ಘಟಕ ಪ್ರಭುತ್ವದ ಜನವಿರೋಧಿತನವನ್ನು, ಅದು ನಡೆಸುತ್ತಿರುವ ಕಗ್ಗೊಲೆಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಮರ್ಥಿಸುವ ರೀತಿಯಲ್ಲಿ ಹೇಳಿಕೆಗಳನ್ನು ನೀಡುತ್ತಿದೆ.

ನಮ್ಮ ಪಕ್ಷ ಜನರನ್ನು ಪ್ರಧಾನವಾಗಿ ಸಶಸ್ತ್ರ ಹೋರಾಟಗಳಲ್ಲಿ ಸಂಘಟಿಸುತ್ತಾ ಇತರ ಹಲವಾರು ರೂಪಗಳಲ್ಲೂ ಜನರನ್ನು ಸಂಘಟಿಸುತ್ತಿದೆ. ಕಾ॥ ಮನೋಹರ್ ಜೈಲಿನಿಂದ ಬಿಡುಗಡೆ ಆದ ನಂತರ ಬಹಿರಂಗ ಸಮೂಹ ಹೋರಾಟಗಳಲ್ಲಿ ತೊಡಗಿದ್ದರು. ಅವರ ರಾಜಿರಹಿತ ನಿಲುವುಗಳನ್ನು ಸಹಿಸಲಾಗದ ಶಕ್ತಿಗಳು ಹಾಗೂ ಪ್ರಭುತ್ವ ಅವರನ್ನು ಮತ್ತೊಮ್ಮೆ ಸುಳ್ಳುಕೇಸುಗಳಡಿ ಜೈಲಿಗೆ ತಳ್ಳಿ ಕೊಳೆಸಲು ಕುತಂತ್ರ ನಡೆಸುತ್ತಿರುವುದು ಗೊತ್ತಾದ ನಂತರವೇ, ಇನ್ನು ಬಹಿರಂಗವಾಗಿದ್ದರೆ ಕೆಲಸ ಮಾಡಲು ಕಷ್ಟ ಎಂದು ಅರಿವಾಗಿ ಅವರು ಭೂಗತರಾಗಿ ನಮ್ಮ ಪಕ್ಷದ ದಳವನ್ನು ಸೇರಿಕೊಂಡರು. ಜಿಲ್ಲಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮೇರುತಿ ದಳದೊಂದಿಗೆ ಜನರ ನಡುವೆ ತಿರುಗಾಡುತ್ತಿದ್ದ ಕಾ॥ ಮನೋಹರ್, ಕಾ॥ ದೇವಯ್ಯ ಹಾಗೂ ಕಾ॥ ರವಿಯವರನ್ನು ಕಗ್ಗೊಲೆಗೈದು ದುಡಿಯುವ ಜನರ ದನಿಗಳನ್ನು ಅಡಗಿಸಿದ್ದೇವೆ ಎಂಬ ಹಮ್ಮಿನಲ್ಲಿ ಸರ್ಕಾರ ಮತ್ತು ಅದರ ಹಂತಕ ಅಧಿಕಾರಿಗಳು ಬೀಗಲು ಸಾಧ್ಯವಿಲ್ಲ. ಈ ಸಂಗಾತಿಗಳು ಶೋಷಿತ ಜನತೆಯ ಪ್ರತಿನಿಧಿಗಳಾಗಿದ್ದರು. ಅವರು ಭೌತಿಕವಾಗಿ ಇಂದು ಇಲ್ಲದಿದ್ದರೂ ಅವರು ಹೊತ್ತಿಸಿದ ಕ್ರಾಂತಿಕಾರಿ ಕಿಡಿ ಆರುವುದಿಲ್ಲ. ಅದು ಮತ್ತಷ್ಟು ಪ್ರಜ್ವಲಿಸುವಂತೆ ಮಾಡುವ ಹೊಣೆಗಾರಿಕೆ ಹೊತ್ತುಕೊಳ್ಳುವ ಹಲವಾರು ಸಂಗಾತಿಗಳು ಜನರ ಮಧ್ಯದಿಂದಲೇ ಬೆಳೆದುಬರುತ್ತಾರೆ.

ಕಗ್ಗೊಲೆಗಳನ್ನು ನಡೆಸಿ ನಮ್ಮ ಪಕ್ಷದ ನಾಯಕತ್ವದಲ್ಲಿ ನಡೆಯುವ ಕ್ರಾಂತಿಕಾರಿ ಚಳುವಳಿಯನ್ನು ಬಗ್ಗುಬಡಿಯಲು ಸಾಧ್ಯವಿಲ್ಲ ಎಂಬುದನ್ನು ಚರಿತ್ರೆ ಈಗಾಗಲೆ ಸ್ಪಷ್ಟಪಡಿಸಿದೆ. ಅದನ್ನು ಅರ್ಥ ಮಾಡಿಕೊಳ್ಳಲಾಗದ ಆಳುವ ಜನಗಳು ತಮ್ಮ ಶೋಷಕ ಆಧಿಪತ್ಯವನ್ನು ಮುಂದುವರೆಸಲು ಇಂತಹ ನೀಚ ಜನವಿರೋಧಿ ಕೃತ್ಯಗಳನ್ನು ನಡೆಸುತ್ತಾ ಜನರಿಂದ ದೂರವಾಗುತ್ತಿದ್ದಾರೆ. ಜನರ ಸಿಟ್ಟನ್ನು ಹೆಚ್ಚಿಸುತ್ತಿದ್ದಾರೆ. ಇದೆಲ್ಲದರ ಪ್ರತಿಫಲವನ್ನು ಅವರು ಅನುಭವಿಸಲೇಬೇಕಾಗುತ್ತದೆ. ಕೆಂಪಯ್ಯನಂತಹ ಆಳುವ ವರ್ಗದ ಸಾಕುನಾಯಿಗಳು ಇದರಿಂದ ಹೊರಗುಳಿಯಲಾಗುವುದಿಲ್ಲ.

ನಾಡಿನ ಪ್ರಜಾತಂತ್ರವಾದಿಗಳೆ, ಪ್ರಗತಿಪರ ಸಂಘಟನೆಗಳೆ ಹಾಗೂ ವ್ಯಕ್ತಿಗಳೆ, ಜನಪರ ನಿಲುವಿನ ಪತ್ರಕರ್ತರೆ ಮಾಧ್ಯಮ ಪ್ರತಿನಿಧಿಗಳೆ, ಮಾನವ ಹಕ್ಕು ಹೋರಾಟಗಾರರೆ, ಜನರು ಎದುರಿಸುತ್ತಿರುವ ತೀವ್ರ ಸಂಕಷ್ಟಗಳನ್ನು ಅದರ ಪ್ರತಿಭಟನೆಯಾಗಿ ಜನರು ನಡೆಸುತ್ತಿರುವ ಹೋರಾಟಗಳನ್ನು, ಜನರು ಆಯ್ದುಕೊಳ್ಳುತ್ತಿರುವ ಹೋರಾಟದ ರೂಪಗಳನ್ನು ಈ ಶೋಷಕ ವ್ಯವಸ್ಥೆಯ ಚೌಕಟ್ಟಿಗೆ ಒಳಪಡಿಸಿ ನೋಡಿ ಜನಸಾಮಾನ್ಯರ ನೆಲೆಯಲ್ಲಿ ನಿಂತು ಗ್ರಹಿಸಿ ಪ್ರತಿಕ್ರಿಯಿಸಬೇಕೆಂದು ಕೋರುತ್ತಿದ್ದೇವೆ. ನಿಮ್ಮ ಪ್ರತಿಯೊಂದು ಪ್ರತಿಕ್ರಿಯೆಗಳು ಹಾಗೂ ನಡೆಗಳು ಆಳುವ ಜನರಿಗೆ ಹಾಗೂ ಈ ಶೋಷಕ ವ್ಯವಸ್ಥೆಗೆ ಅನುಕೂಲವಾಗುವ ರೀತಿಯಲ್ಲಿ ಆಗದಂತೆ ನೋಡಿಕೊಳ್ಳಬೇಕೆಂದು ವಿನಂತಿಸುತ್ತಿದ್ದೇವೆ.

ಮಾವಿನಹೊಲ ಎನ್‌ಕೌಂಟರ್ ನೆಪದಲ್ಲಿ ರಾಜ್ಯದ ಫ್ಯಾಸಿಸ್ಟ್ ಬಿಜೆಪಿ ಸರ್ಕಾರ ನಡೆಸಿದ ಕಗ್ಗೊಲೆಗಳನ್ನು ಖಂಡಿಸಿ ಹೋರಾಡಬೇಕೆಂದು ಕೋರುತ್ತಿದ್ದೇವೆ.

ಸರ್ಕಾರಗಳು ಮತ್ತದರ ಯಂತ್ರಾಂಗಗಳು ಬಹುಸಂಖ್ಯಾತ ಜನರ ಒಪ್ಪಿಗೆಯಿಲ್ಲದೆ ಯಾವುದೇ ನೀತಿಗಳು ಹಾಗೂ ಯೋಜನೆಗಳನ್ನು ಜಾರಿಗೆ ತರಕೂಡದೆಂಬ ಹಕ್ಕೊತ್ತಾಯವನ್ನು ಬಲವಾಗಿ ಪ್ರತಿಪಾದಿಸಬೇಕೆಂದು ಎಲ್ಲರಲ್ಲೂ ಕೋರುತ್ತಿದ್ದೇವೆ.

ಕ್ರಾಂತಿಕಾರಿ ಶುಭಾಶಯಗಳೊಂದಿಗೆ,

ಭಾಸ್ಕರ್

(ಪರವಾಗಿ)

ಸಿಪಿಐ (ಮಾವೋವಾದಿ)

ದೃಕ್ಪಥ ಪ್ರದೇಶ

**3.12.2008** ಕರ್ನಾಟಕ